# ಅಂಬೇಡ್ಕರ್‌ರವರ ಸಾಮಾಜಿಕ ಚಿಂತನೆಗಳು

**ಪ್ರಸನ್ನಕುಮಾರ್ ಕೆ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಡಾ.ಎನ್.ಎಸ್.ಎ.ಎಂ. ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ, ಬೆಂಗಳೂರು.

**Received: 11/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788784**

## ABSTRACT:

ಡಾ.ಬಿ.ಆರ್. ಅಂಬೇಡ್ಕರ್ ಅವರು ಭಾರತದ ಸಂವಿಧಾನ ಶಿಲ್ಪಿ ಎಂದು ಕರೆಸಿಕೊಂಡ ಮಹಾನ್ ವ್ಯಕ್ತಿ. ಇವರು ಸಾಮಾಜಿಕ ಸಮಾನತೆ, ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು. ಇವರು ದೇಶಕ್ಕಾಗಿ ಮಾಡಿದ ಹೋರಾಟಗಳು ಎಂತಹ ದುರ್ಬಲ ವ್ಯಕ್ತಿಗಳನ್ನೂ ಸಹ ಎಚ್ಚರಿಸುತ್ತದೆ. ಇವರ ಕೊಡುಗೆಯನ್ನು ಭಾರತೀಯ ಜನತೆ ಎಂದಿಗೂ ಮರೆಯುವುದಿಲ್ಲ. ಸಂವಿಧಾನ ರಚನೆಗೆ ಮಾತ್ರವಲ್ಲದೇ ಅವರ ಸೇವೆ ಜನತೆಯನ್ನು ಜಾಗೃತರಾಗಿ ಮಾಡುವ ಸಾಧನವಾಗಿದೆ ಎನ್ನಬಹುದು.

ಅಂಬೇಡ್ಕರ್ ಅವರು ವೈಚಾರಿಕತೆಯ ನೆಲೆಯಲ್ಲಿ ಈ ದೇಶವನ್ನು ಮುಂದೆ ತೆಗೆದುಕೊಂಡು ಹೋಗಬೇಕೆಂಬ ಮಹದಾಶಯವನ್ನು ಹೊಂದಿರುವ ಅಪರೂಪ ವ್ಯಕ್ತಿ. ಈ ಹಿನ್ನಲೆಯಲ್ಲಿಯೇ ಅವರು "ಈ ದೇಶದಲ್ಲಿ ಗುಡಿ-ಗೋಪುರಗಳಿಗಿಂತ ಶಾಲೆಗಳು ತೆರೆದರೆ, ಆ ದೇಶ ಉದ್ಧಾರವಾಗುತ್ತದೆ" ಎಂಬ ನಿಲುವನ್ನು ತಾಳಿದ್ದರು. ಅಂಬೇಡ್ಕರ್ ಅವರ ಆಲೋಚನೆಗಳು, ಜೀವನ ಮೌಲ್ಯಗಳು ಸಾಹಿತ್ಯ ಕ್ಷೇತ್ರದಲ್ಲೂ ವಸ್ತುವಾಗುತ್ತಿದೆ ಎಂದರೆ; ಆ ವ್ಯಕ್ತಿಯ ಅನನ್ಯತೆಯ ಬಗ್ಗೆ ಅವಲೋಕನ ಮಾಡಬೇಕಾದದ್ದೇ ಸರಿ. ಅವರ ನಡೆ, ನುಡಿಗಳ ಜಾಡನ್ನಿಡಿದರೆ ನಾವು ಎಂತಹ ಅಸಮಾನತೆಯನ್ನಾಗಲೀ, ಕಷ್ಟಕರವಾದ ಯಾವುದೇ ಕೆಲಸವಾಗಲೀ ಅಂತಹವುಗಳಿಂದ ನಾವು ಸುಲಭವಾಗಿ ತಪ್ಪಿಸಿಕೊಳ್ಳಬಹುದೆಂಬ ಅರಿವು ಮನದಟ್ಟಾಗುತ್ತದೆ.

## KEYWORDS:

ಮಾನವತಾವಾದಿ, ನೇತಾರ, ಶ್ರೇಣಿಕೃತ, ಸಂವಿಧಾನ, ಧೀಮಂತ, ಶೋಚನೀಯ, ಚೌಡಾರ್‌ಕೆರೆ, ಮಹಾಮನೆಯ, ಆಲವೆ.

ಅಂಬೇಡ್ಕರ್‌ರವರು ಭಾರತಕಂಡ ಮಹಾನ್ ಮಾನವತಾವಾದಿ, ಇವರು ದಲಿತರ ವಿಮೋಚನೆಗಾಗಿ ಜೀವನ ಪರ್ಯಂತ ಹೋರಾಟ ಮಾಡಿದ ಧೀಮಂತ ನಾಯಕ, ಇವರ ಚಿಂತನೆಗಳು ಸಮಾನತೆಯ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇವರು ಸಂವಿಧಾನ ಶಿಲ್ಪಿಯಾಗಿ ಇಡೀ ವಿಶ್ವವೇ ಕೊಂಡಾಡುವ ಮಹಾನ್ ನೇತಾರರಾಗಿದ್ದಾರೆ, ಇವರ ಚಿಂತನೆಗಳು ಸಾರ್ವತ್ರಿಕ ಮನ್ನಣೆ ಪಡೆದಿವೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರು ಸಮಾಜಕ್ಕೆ ನೀಡಿರುವ ಕೊಡುಗೆ ಅನನ್ಯವಾದುದು. ಪ್ರಸ್ತುತ ಲೇಖನದಲ್ಲಿ ಅವರ ಸಾಮಾಜಿಕ ಚಿಂತನೆಗಳನ್ನು ವಿಶ್ಲೇಷಿಸುವ ಪ್ರಯತ್ನವಿದೆ. ಅಂಬೇಡ್ಕರ್‌ರವರು 20ನೇ ಶತಮಾನ ಕಂಡ ಶ್ರೇಷ್ಠ ಸಮಾಜ ಸುಧಾರಕರಾಗಿದ್ದರು. ಅವರು ಹುಟ್ಟಿನಿಂದ ಹಿಂದೂವಾಗಿದ್ದರು. ಅವರಿಗೆ ಹಿಂದೂ ಧರ್ಮದ ಬಗ್ಗೆ ಯಾವುದೇ ರೀತಿಯ ಪೂರ್ವಾಗ್ರಹ ಮತ್ತು ಅಸಹನೆಗಳು ಇರಲಿಲ್ಲ. ಆದರೆ ಹಿಂದೂ ಧರ್ಮದ ವಿಧಿ ವಿಧಾನಗಳು ಅಸ್ಪೃಶ್ಯರು ಮತ್ತಿತರ ಶೋಷಿತ ಭಾರತೀಯರ ಬದುಕುವ ಹಕ್ಕನ್ನು ಕಸಿದುಕೊಂಡ ಬಗೆಯನ್ನು ಅಂಬೇಡ್ಕರ್ ತೀವ್ರವಾಗಿ ಖಂಡಿಸಿದರು.

ಭಾರತದಲ್ಲಿನ ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಮತ್ತು ಮಹಿಳೆಯರ ಮಾನವ ಹಕ್ಕುಗಳಿಗಾಗಿ ಹೋರಾಡಿದ ಪ್ರಥಮ ವ್ಯಕ್ತಿ ಬಿ.ಆರ್. ಅಂಬೇಡ್ಕರ್‌ರವರು. ಅವರ ಬದುಕಿನ ಕೊನೆಯ ದಿನಗಳವರೆಗೂ ಮಹಿಳಾ ಸಬಲೀಕರಣಕ್ಕಾಗಿ ಹೋರಾಟ ಮಾಡಿದ ಧೀಮಂತ ವ್ಯಕ್ತಿ. ಮಹಾನ್ ಹೊರಾಟಗಾರರು ಮಾತ್ರವಲ್ಲದೆ ಸ್ತ್ರೀ ಚಿಂತಕರೂ ಆಗಿದ್ದರು. ಹಿಂದೂ ಧರ್ಮವನ್ನು ಸುಧಾರಿಸುವ ಹಲವಾರು ಪ್ರಯತ್ನಗಳನ್ನು ಅಂಬೇಡ್ಕರ್ ಪ್ರಾಮಾಣಿಕವಾಗಿ ನಡೆಸಿದರು. ಆದರೆ ಚಾತುರ್ವರ್ಣ ವ್ಯವಸ್ಥೆಯ ಪ್ರತಿಪಾದಕರಾದ ಬ್ರಾಹ್ಮಣಶಾಹಿ ವಕ್ತಾರರು ಅಂಬೇಡ್ಕರ್‌ರವರು ಪ್ರತಿಪಾದಿಸಿದ ಸಾಮಾಜಿಕ ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲಿಲ್ಲ. ಅಂಬೇಡ್ಕರ್ ಅವರು ರಾಜಕೀಯ ವಿಷಯಕ್ಕೆ ಸಂಬಂಧಿಸಿದಂತೆ ದೇಶಿಯ ಹಾಗೂ ವಿದೇಶಿಯ ಬರಹಗಾರರು, ರಾಜಕೀಯ ಮುತ್ಸದ್ಧಿಗಳು ಹಾಗೂ ಅನೇಕ ಚಿಂತಕರ ಉತ್ಕೃಷ್ಟ ಗ್ರಂಥಗಳನ್ನು ಅಭ್ಯಸಿಸಿ, ಸಂವಿಧಾನಕ್ಕೆ ಸಂಬಂಧಿಸಿದಂತೆ ವಿಶ್ವದ ಅನೇಕ ರಾಷ್ಟ್ರಗಳ ಸಂವಿಧಾನವನ್ನು ತಿಳಿದುಕೊಂಡು, ನೈಜ ಸಂವಿಧಾನ ತಜ್ಞರಾಗಿ ಸಂವಿಧಾನ ಎಂಬುದಕ್ಕೆ ಅರ್ಥ ಕಲ್ಪಿಸಿದರು.

“ಜಾತಿಯ ಮನೋಭಾವದಿಂದ ವಿಭಜನೆಗೊಳ್ಳುವ ಸಮಾಜವನ್ನು ಪ್ರಜಾಪ್ರಭುತ್ವದ ಬೆಳವಣಿಗೆಯನ್ನು ಶಿಥಿಲಗೊಳಿಸುತ್ತದೆ. ಅದು ಮತ್ತೊಮ್ಮೆ ಅಸಮಾನತೆಯನ್ನು ಸೃಷ್ಟಿಸುತ್ತದೆ”. ಡಾ. ಬಿ. ಆರ್‌ಅಂಬೇಡ್ಕರ್ ದಲಿತರ ಬದುಕಿನಲ್ಲಿ ಅಭಿವೃದ್ಧಿ ತರಲು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು ಅತೀ ಮುಖ್ಯ, ಅವರು ತಮ್ಮ ಕರ್ತವ್ಯಗಳ ಬಗ್ಗೆ ಜವಾಬ್ದಾರಿಯಿಂದ ಮಾತನಾಡಲು ಶಿಕ್ಷಣ ಮುಖ್ಯ.

ಬಲವಂತದಿಂದ ಕಲಿಸುವ ಶಿಕ್ಷಣವಾಗಬಾರದು ಅದು, ಸ್ವಯಂ ಪ್ರೇರಣೆಯಾಗಿ ಶಾಲೆಗೆ ಸೇರಿ ಗಂಡು-ಹೆಣ್ಣು ಎನ್ನುವ ಭೇದವಿಲ್ಲದೆ, ಅರಿವು ಜಾಗೃತವಾಗಬೇಕಾಗಿದೆ ಎಂಬ ಭಾವನೆಯಿಂದ ಸತ್ಯ, ಅಹಿಂಸೆ, ಪ್ರೀತಿ, ಸಮಾನತೆ, ಹೋರಾಟ ಇವೇ ಮೊದಲಾದ ಪ್ರಜಾಸತ್ತಾತ್ಮಕ ಅಸ್ತ್ರಗಳನ್ನು ಉಳಿಸಿಕೊಂಡು ನಾಡಿನ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಅನ್ಯಾಯ, ದಬ್ಬಾಳಿಕೆ ಮೊದಲಾದ ಪಿಡುಗುಗಳ ವಿರುದ್ಧ ಜೀವನ ಪರ್ಯಾಂತ ಹೋರಾಟ ಮಾಡಿದವರು. ತಾವು ಯಾವುದೇ ಜಾತಿ-ಧರ್ಮದ ನಾಯಕರಲ್ಲ, ಮಾನವತೆ ಒಂದೇ ತನ್ನ ಜಾತಿ ಮತ್ತು ಜೀವನಧರ್ಮ ಎಂದು ತಮ್ಮ ಧೋರಣೆ ಹೋರಾಟ ಮತ್ತು ಸಾಧನೆಗಳ ಮೂಲಕ ಸಾಬೀತು ಪಡಿಸಿದವರು. ಹಿಂದೂ ಸಮಾಜದ ಅಸಮಾನತೆಗೆ ಮೂಲ ಕಾರಣವಾದ ಶ್ರೇಣಿಕೃತ ವ್ಯವಸ್ಥೆಯನ್ನೇ ತಾರ್ಕಿಕವಾಗಿ ಪ್ರಶ್ನಿಸಲಾರಂಭಿಸಿದರು. ಅಂಬೇಡ್ಕರ್‌ರವರು ಚರ್ಚಿಸುವ ಇನ್ನೊಂದು ಅಂಶವೆಂದರೆ ಶಿಕ್ಷಣದಲ್ಲಿರುವ ಅಸಮಾನತೆ. ಅಲ್ಲದೆ ಕೆಳ ವರ್ಗದ ಜನತೆಯ ಶಿಕ್ಷಣದ ಭಾರವನ್ನು ಹೊರಬೇಕಾದವರು ಯಾರೆಂದರೆ ಕೋಟಿ ಕೋಟಿ ರೂಪಾಯಿಗಳ ಆದಾಯವಿರುವ ಈ ಪರಿಷತ್ತು ಎನ್ನುವುದನ್ನು ಸಹ ಅಂಬೇಡ್ಕರ್‌ರವರು ವ್ಯಕ್ತಪಡಿಸಿದ್ದಾರೆ.

ಇಷ್ಟೆಲ್ಲಾ ಅವಕಾಶಗಳ ನಡುವೆ ಪ್ರತಿಯೊಬ್ಬ ಹಿಂದುಳಿದವರ ಸಬಲೀಕರಣವಾಗಬೇಕಾದರೆ, ಪ್ರಜ್ಞಾವಂತ ಸಮುದಾಯ ಸಾಕಷ್ಟು ದುಡಿಯ ಬೇಕಾಗುತ್ತದೆ. ಇವತ್ತು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಅವಕಾಗಳು ಸೌಲಭ್ಯಗಳು ದೊರೆಯದೆ ಇರುವುದಕ್ಕೆ ಕಾರಣ ನಮ್ಮ ಬುದ್ಧಿವಂತ ಸಮುದಾಯದ ಜಾಣಗಿವುಡುತನವಾಗಿದೆ, ಎಲ್ಲಾ ವರ್ಗಗಳ ಸವಲತ್ತುಗಳಿದ್ದು ಅವುಗಳನ್ನು ಏನೂ ಅರಿಯದ ಒಬ್ಬ ಹಿಂದುಳಿದ ಅಲ್ಪಸಂಖ್ಯಾತನಿಗೆ ದೊರೆಯದಿದ್ದರೆ ಅದು ನಮ್ಮ ಹಿತಾಸಕ್ತಿಯ ಮನೋಭಾವನೆಯೇ ಹೊರತು ಆತನ ತಪ್ಪಲ್ಲ. ಎಲ್ಲಾ ಕಾರ್ಯಕ್ರಮಗಳು, ಹೋರಾಟಗಳು, ಜಾಥಾಗಳು ಕೇವಲ ಸಾಂಕೇತಿಕತೆಯ ಸ್ವರೂಪ ಪಡೆದರೆ ತಪ್ಪಾಗುತ್ತದೆ. ಬರೀ ನಿರೂಪಕರಾದರೆ ಸಾಲದು ಅದು ಕಾರ್ಯಗತಗೊಳ್ಳಬೇಕಾಗುತ್ತದೆ. ಡಾ.ಅಂಬೇಡ್ಕರ್‌ರವರ ನಡೆ ಸ್ವಾರ್ಥದಿಂದ ಕೂಡಿದ್ದರೆ ಹಿಂದುಳಿದ ಜನಾಂಗದಲ್ಲಿ ಬದಲಾವಣೆ ಸಾಧ್ಯವಿರಲಿಲ್ಲ. ಅಂಬೇಡ್ಕರರಂತಹ ಪ್ರಾಮಾಣಿಕ, ಧೀಮಂತ, ಸಮರ್ಪಣಾ ಮನೋಭಾವವಿರುವಂತಹ ದಲಿತ ನಾಯಕರು ಹುಟ್ಟಿ ಬಂದಲ್ಲಿ ಶೋಷಿತರಿಗೆ ಸಾಮಾಜಿಕ ನ್ಯಾಯ ಸಿಗುತ್ತೆ ಮತ್ತು ಸಮಾನತೆಯ ತತ್ವಕ್ಕೆ ಅರ್ಥ ಬರುತ್ತದೆ. ಹೀಗಾಗಿ ದಲಿತರು ಮೇಲು ವರ್ಗದ ಶೋಷಣೆಗೆ ಒಳಗಾಗಿ ಪಡಬಾರದ ಕಷ್ಟ ಪಡುವುದಕ್ಕಿಂತ ತಮ್ಮ ನೆಲೆಯಲ್ಲಿ ನಿಂತು ತಮ್ಮ ಸಮಾನತೆಗಾಗಿ ಹೋರಾಡುವುದು ಮತ್ತು ತಮ್ಮದೇ ಆದ ವಿಶಿಷ್ಟತೆಯಿಂದ ಮನುಷ್ಯರಾಗಿ ಬಾಳಿದರೆ ಮಹಾ ಮಾನವತವಾದಿ ಅಂಬೇಡ್ಕರರವರ ಚಿಂತನೆಯ ಹೋರಾಟಕ್ಕೆ, ಬರಹಗಳಿಗೆ

ನಿಜವಾದ ಬೆಲೆ ನೀಡಿದಂತಾಗುತ್ತದೆ. ನಾನು ಎಳೆದು ತಂದ ಈ ವಿಮೋಚನಾ ರಥವನ್ನು ಸಾಧ್ಯವಾದರೆ ಮುನ್ನಡೆಸಿ ಇಲ್ಲದಿದ್ದರೆ ಇಲ್ಲಿಯೇ ನಿಲ್ಲಿಸಿಬಿಡಿ. ಹಿಂದಕ್ಕೆ ಮಾತ್ರ ಎಳೆಯಬೇಡಿ ಎಂಬ ಸೈದ್ಧಾಂತಿಕ ನಿಲುವಿಗೂ ದಿಕ್ಕು ದಿಕ್ಕಿಗೂ ಛಿದ್ರವಾಗಿರುವ ದಲಿತ ಚಳವಳಿಗೂ ಸಾಮಿಪ್ಯವಿದೆ. ಪ್ರಸ್ತುತ ದಲಿತ ಚಳವಳಿ ಹೊಸ ಆಯಾಮಗಳನ್ನು ಕಂಡುಕೊಳ್ಳಬೇಕಿದೆ. ದಲಿತರಿಗೆ ಮೂಲ ಪ್ರೇರಕವಾದ ಅಂಬೇಡ್ಕರ್ ಅವರನ್ನು ಹಾಗೂ ಅವರ ಚಿಂತನೆಯನ್ನು ದಲಿತ ಚಳವಳಿಗೆ ಸಂಪೂರ್ಣವಾಗಿ ಸಮೀಕರಿಸಿ ದಲಿತರ – ಶೋಷಿತರ– ಮಹಿಳೆಯರ ಸಮಸ್ಯೆಯ ಬಗ್ಗೆ ಹಾಗೂ ಜಾತಿ ವ್ಯವಸ್ಥೆಯ ಎಲ್ಲ ಜನರನ್ನು ಒಂದುಗೂಡಿಸಿ ಹೊಸ ಆಯಾಮಗಳಿಂದ ಹೋರಾಟ ಮಾಡುವ ಚಿಂತನೆ ದಲಿತರಲ್ಲಿ ಬರಬೇಕಾಗಿದೆ.

ಚೌಡಾರ್‌ಕೆರೆಯ ನೀರನ್ನು ಮುಟ್ಟಿದ ಪ್ರಸಂಗ: ಇದೊಂದು ಅಪೂರ್ವ ಸಂದರ್ಭವಾಗಿದೆ. ಗುಲಾಮಗಿರಿ, ಜಾತಿಪದ್ದತಿ, ಮತ್ತು ಪುರೋಹಿತ ಶಾಹಿಗಳ ವಿರೋಧಿ ಅಂಬೇಡ್ಕರ್ ಅಸ್ಪೃಶ್ಯರಲ್ಲಿ ಕಾಣಿಸಿಕೊಳ್ಳಲಾರಂಭಿಸಿದ ಅಪ್ರತಿಮ ಜಾಗೃತಿಯ ಸಂಕೇತವಾಗಿದ್ದರು. ಯಾವ ಕೆರೆಯ ನೀರನ್ನು ಹಿಂದೂ ಸವರ್ಣಿಯರು, ಮುಸ್ಲಿಮರು, ಕ್ರೈಸ್ತರು, ಅನ್ಯಧರ್ಮಿಯರು ಪ್ರಾಣಿ ಪಕ್ಷಿಗಳು ಮುಟ್ಟಬಹುದಾಗಿತ್ತೋ ಆ ಕೆರೆಯ ನೀರನ್ನು ಅಸ್ಪೃಶ್ಯರು ಮುಟ್ಟುವ ಹಾಗಿರಲಿಲ್ಲ. ತಲೆಮಾರುಗಳಿಂದ ಅವಮಾನಿಸಲ್ಪಟ್ಟ ಅಸ್ಪೃಶ್ಯರು ತಮ್ಮ ನಾಗರೀಕ ಹಕ್ಕು ಚಲಾಯಿಸಲು ಹೊರಟ್ಟಿದ್ದ ಆ ಗಳಿಗೆಯಲ್ಲಿ ಅವರ ಮುಖದ ಮೇಲೆ ಅಪೂರ್ವ ಆತ್ಮಗೌರವ ರಾರಾಜಿಸುತ್ತಿತ್ತು. ಸನಾತನವಾದಿ ಕಟ್ಟುಕಟ್ಟಳೆಗಳ ಮೇಲೆ ಧಾಳಿ ಮಾಡಿ ಅವುಗಳನ್ನು ಧ್ವಂಸ ಮಾಡಲು ಸಾಗುತ್ತಿದ್ದ ಪಡೆಯ ದಿಟ್ಟ ನೇತಾರರಾಗಿ ಅಂಬೇಡ್ಕರ್ ಕಂಗೊಳಿಸುತ್ತಿದ್ದರು. ಶತಮಾನಗಳಿಂದ ದಮನಕ್ಕೊಳಗಾದ ಸಮುದಾಯಗಳಿಗೆ ಹೊಸ ಸ್ಥಾನಮಾನ ಒದಗಿಸುವ ಮೂಲಕ ಭಾರತದಲ್ಲಿ ಸಾಮಾಜಿಕ ಬದಲಾವಣೆಯನ್ನುಂಟು ಮಾಡಿದರು. ಹಾಗಾಗಿ ಮೊದಲು ಅಂಬೇಡ್ಕರರು ಕೆರೆಯ ನೀರನ್ನು ಮುಟ್ಟಿದರು. ಅನಂತರ ಸಾವಿರಾರು ಜನ ಮೆರವಣಿಗೆಕಾರರೂ ನೀರು ಮುಟ್ಟಿದರು. ತದ ನಂತರದಲ್ಲಿ ಸವರ್ಣಿಯರು ಮತ್ತು ದಲಿತರ ನಡುವೆ ಗಲಭೆ ಸಂಭವಿಸಿ ಅಪಾರ ಸಾವು ನೋವುಗಳಾದವು. ಇಂತಹ ಸಂದರ್ಭದಲ್ಲಿ ಅಂಬೇಡ್ಕರರು ಬಹಳ ತಾಳ್ಮೆಯಿಂದ ವರ್ತಿಸಿ ತಮ್ಮ ಆಕ್ರೋಷಿತ ಜನರನ್ನು ನಿಯಂತ್ರಿಸಿ ಶಾಂತಿ ಮತ್ತು ಕಾನೂನಾತ್ಮಕ ಹೋರಾಟವನ್ನು ನಡೆಸುವಂತೆ ಪ್ರೇರೇಪಿಸಿದರು. ಹೀಗೆ ಅಂಬೇಡ್ಕರರ ಮಾರ್ಗದರ್ಶನ, ಸಮಯೋಚಿತ ನಿಲುವುಗಳು ಆದರ್ಶ ಪ್ರಾಯವಾದುವು. ಅಸ್ಪೃಶ್ಯರು ಮಹಾಡ್‌ನಲ್ಲಿ ನಡೆಸಿದ ಸಮಾವೇಶಕ್ಕೆ ಭಾರತದ ಆಧುನಿಕ ಚರಿತ್ರೆಯಲ್ಲಿ ವಿಶೇಷ ಮಹತ್ವವಿದೆ. ಈ ಸಮಾವೇಶವು ಅಸ್ಪೃಶ್ಯ ಸಮುದಾಯಗಳ ಮೇಲೆ, ಹಿಂದೂ ಸವರ್ಣೀಯರ ಮೇಲೆ, ಬ್ರಿಟಿಷ್ ಆಡಳಿತದ ಮೇಲೆ ಹಾಗೂ ಕಾಂಗ್ರೆಸ್ ಮೇಲೆ ಅದ್ಭುತ ಪರಿಣಾಮ ಬೀರಿತು. 20ನೇ ಶತಮಾನದಲ್ಲಿ

ಅಸ್ಪೃಶ್ಯರು ಬೃಹತ್ ಸಂಖ್ಯೆಯಲ್ಲಿ ಸಾರ್ವಜನಿಕವಾಗಿ ತಮ್ಮ ನಾಗರಿಕ ಹಕ್ಕುಗಳನ್ನು ಪ್ರತಿಪಾದಿಸಿದ ಪ್ರಥಮ ಪ್ರಸಂಗವಾಗಿತ್ತು.

ಭಾರತದಲ್ಲಿ ಶೋಷಿತರ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಭಾರತದ ರಾಷ್ಟ್ರೀಯ ಸಂಗ್ರಾಮದಲ್ಲಿ ರಕ್ತ ಚೆಲ್ಲಿದವರು ಬಹುಸಂಖ್ಯಾತ ಶೋಷಿತರು ಆದರೆ ಲಾಭ ಪಡೆದವರು ಅಲ್ಪಸಂಖ್ಯಾತ ಬ್ರಾಹ್ಮಣರು, ವೈಶ್ಯರು ಮತ್ತು ಕ್ಷತ್ರಿಯರು. ಕಷ್ಟದ ದಿನಗಳಲ್ಲಿ ಶೋಷಿತರು ಮೊದಲು ಬಲಿಯಾಗುತ್ತಾರೆ, ಆದ್ದರಿಂದ ಶೋಷಿತ ವರ್ಗಗಳು ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಗಳ ವಿರುದ್ಧ ಹೋರಾಟ ನಡೆಸಬೇಕಿದೆ. ಹಾಗಾಗಿ ಶೋಷಿತ ವರ್ಗಕ್ಕೆ ಸಂಘಟಿತರಾಗಿ ರಾಜಕೀಯ ಅಧಿಕಾರ ಗಳಿಸುವುದು ಏಕೈಕ ಮುಕ್ತಿ ಮಾರ್ಗವಾಗಿದೆ. ರಾಜಕೀಯ ಅಧಿಕಾರ ನಿತ್ಯಸತ್ಯವಾಗಿದ್ದು ದುರ್ಬಲರನ್ನು ಸಬಲರನ್ನಾಗಿ ಮಾಡುವ ಸಂಜೀವಿನಿಯಾಗಿದೆ. ಶೋಷಿತರು ಬ್ರಾಹ್ಮಣಶಾಹಿಯೆಂಬ ಮೋಹಿನಿ ಬಲೆಗೆ ಬೀಳದೆ ಆನೆ ಮೇಲೆ ಸಂಸತ್ತನ್ನು ಸ್ವಾಭಿಮಾನದಿಂದ ಪ್ರವೇಶಿಸಿ ಭಾರತವನ್ನು ಮತ್ತೊಮ್ಮೆ ಪ್ರಬುದ್ಧ ಭಾರತವನ್ನಾಗಿ ರೂಪಿಸಬೇಕೆಂಬ ಪ್ರಗತಿಶೀಲ ರಾಜಕೀಯ ಚಿಂತನೆಯನ್ನು ಅಂಬೇಡ್ಕರ್ ಪರಿಣಾಮಕಾರಿಯಾಗಿ ಮಂಡಿಸಿದರು.

ದಲಿತ ಸಮೂಹದ ಮೇಲಾಗುತ್ತಿದ್ದ ಮಾನಸಿಕ, ದೈಹಿಕ ದೌರ್ಜನ್ಯಗಳ ವಿರುದ್ಧ ರಾಜ್ಯದಾದ್ಯಂತ ಸಂಘಟನಾತ್ಮಕವಾಗಿ ಹೋರಾಟ ಮಾಡಿದ್ದು, ಅಂಬೇಡ್ಕರ್‌ರವರ ಆಶಯದಂತೆ ದಲಿತರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡಲು ಅವರಿಗೇ ದಕ್ಕಬೇಕಾದ ಭೂಮಿಯನ್ನು ದೊರಕಿಸಿ ಕೊಡಲು ನಡೆಸಿದ ಹೋರಾಟಗಳು, ಮೀಸಲಾತಿಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ನಡೆಸಿದ ಹೋರಾಟಗಳು, ಅಸ್ಪೃಶ್ಯತೆಯ ಆಚರಣೆಯ ವಿರುದ್ದ ನಡೆಸಿದ ಹೋರಾಟಗಳು, ಬುದ್ಧನೆಡೆಗೆ ಮರಳಿ ಮನೆಗೆ ಕಾರ್ಯಕ್ರಮದ ಮೂಲಕ ನಡೆದ ದಲಿತ ಧರ್ಮಾಂತರ ಕಾರ್ಯಕ್ರಮಗಳು, ದಲಿತ ಸಮೂಹದಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಗೌರವವನ್ನು ಮೂಡಿಸಿದ್ದನ್ನಂತೂ ತಳ್ಳಿ ಹಾಕುವಂತಿಲ್ಲ. ಅಲ್ಲದೆ ಅಂಬೇಡ್ಕರ್‌ರವರ ಕಟ್ಟಾ ಅನುಯಾಯಿ ಆಗಿದ್ದ ಬಿ. ಬಸವಲಿಂಗಪ್ಪನವರ ಪ್ರಕರಣದ ನಂತರವಂತೂ ಕೇವಲ ಒಂದು ಜಾತಿ ಸಮುದಾಯದ ಚಳುವಳಿಯಾಗಿದ್ದ ದಲಿತ ಚಳುವಳಿ ಕರ್ನಾಟಕದಲ್ಲಿ ಒಂದು ಸಾಂಸ್ಕೃತಿಕ ಚಳುವಳಿಯ ರೂಪವನ್ನು ಪಡೆದುಕೊಂಡಿತು. ದಲಿತ ಚಳುವಳಿಯ ಭಾಗವಾಗಿ ಹುಟ್ಟಿಕೊಂಡ ದಲಿತ ಸಂಘಟನೆಗಳಲ್ಲಿ ದಲಿತ ಸಂಘರ್ಷ ಸಮಿತಿಯ ಪಾತ್ರ ಮಹತ್ತರವಾಗಿದೆ.

ಆಧುನಿಕ ಭಾರತದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಧಾರೆಗಳನ್ನು ಪ್ರಬಲವಾಗಿ ಪ್ರಭಾವಿಸುತ್ತಿರುವುದು ಅಂಬೇಡ್ಕರ್‌ವಾದ ಎಂದು

ಒಕ್ಕೊರಲಿನಿಂದ ಪ್ರಗತಿಪರ ಚಿಂತಕರು ಹೇಳುತ್ತಾರೆ. ಇಂದು ಅಂಬೇಡ್ಕರ್ ಚಿಂತನೆ ಮತ್ತು ದಲಿತ ಚಳುವಳಿಗಳು ಗಾಂಧೀಜಿ ಚಿಂತನೆ ಮತ್ತು ಮೂಲಭೂತ ವಾದಗಳನ್ನು ಪಲ್ಲಟಗೊಳಿಸಿದೆ. ಮೂಲಭೂತ ವಾದಿಗಳು ಮತ್ತು ಮಾನವತಾ ವಾದಿಗಳ ನಡುವಣ ಸಂಘರ್ಷದಲ್ಲಿ ಇಂದು ಮಾನವತಾ ವಾದಿಗಳು ಮುಂಚೂಣಿಗೆ ಬರುತ್ತಿದ್ದಾರೆ. ಅಂಬೇಡ್ಕರ್‌ರವರನ್ನು ಯುಗಪುರುಷರೆಂದು ಭಾರತೀಯ ಸಮಾಜ ಒಪ್ಪಿಕೊಂಡಿದೆ. ಅಂಬೇಡ್ಕರ್ ಚಿಂತನೆ ಸಾರ್ವಕಾಲಿಕವಾದುದು. ಹೀಗೆ ಅಂಬೇಡ್ಕರ್‌ರವರು ತಾನು ಹುಟ್ಟಿ ಬೆಳೆದ ನಾಡಿನಲ್ಲಿನ ಇಂತಹ ಮೌಢ್ಯ, ಅಮಾನವೀಯ ಜಾತೀಯತೆ, ದಬ್ಬಾಳಿಕೆಗಳನ್ನು ಖಂಡಿಸಿ ಸಮಾನತೆಯ ಸಮಾಜ ನಿರ್ಮಾಣ ಮಾಡಲು ಬೇಕಾದ ಅವಶ್ಯಕತೆಗಳನ್ನು ಸಂವಿಧಾನದ ಚೌಕಟ್ಟಿನಲ್ಲಿ ಕಾನೂನಾತ್ಮಕವಾಗಿ ಜಾರಿಗೆ ತರಲು ಶ್ರಮ ವಹಿಸಿದರು.

ಆ ಕಾರಣದಿಂದಾಗಿಯೇ ಡಾ. ಸಿದ್ದಲಿಂಗಯ್ಯನವರು ಅಂಬೇಡ್ಕರ್ ಅವರ ಬಗ್ಗೆ ತನ್ನದೇ ಆದ ನಿಲುವನ್ನು ಮತ್ತು ಅಂಬೇಡ್ಕರ್‌ರ ವ್ಯಕ್ತಿತ್ವವನ್ನು ಹೀಗೆ ಕಟ್ಟಿ ಕೊಡುತ್ತಾರೆ.

**"ನಾಡನಡುವಿನಿಂದ ಸಿಡಿದ**
**ನೋವಿನ ಕೋಗೇ**
**ಆಕಾಶದ ಅಗಲಕ್ಕೂ**
**ನಿಂತ ಆಲವೆ**
**ಕೋಟಿ ಕೋಟಿ ಕಪ್ಪುಜನರ**
**ಮೊಟ್ಟ ಮೊದಲ ಮಾತೇ**
**ನೀರನಾಚೆ ಮೋಡದಾಚೆ**
**ಮೊಳಗಿದಂಥ ಘೋಷವೆ**
**ಬಾಳಿನಲ್ಲೆ ಕಂಡುಕೊಂಡೆ**
**ಹೋರಾಟದದಾರಿಯ**
**ಕರೆದುಕರೆದು ತೋರಿಸಿದೆ**
**ಮಹಾಮನೆಯ ಬಿರುಕನು**
**ಜಾತಿಯನ್ನು ಹೂತುಬಿಡಲು**
**ಲಕ್ಷ ಲಕ್ಷಜನರನು**
**ಕಟ್ಟಿ ಕ್ರಿಯಾರಂಗಕಿಳಿದ**
**ಸ್ವಾಭಿಮಾನ ಸಮುದ್ರ"**

ಅಂದರೆ ಅಂಬೇಡ್ಕರ್ ಅವರು ಈ ದೇಶಕ್ಕೆ ಯಾವ ರೀತಿ ಒಂದು ಹೊಸ ವ್ಯವಸ್ಥೆಯನ್ನು ರೂಪಿಸಿದರು. ಜೊತೆಗೆ ಎಲ್ಲರೂ ಸಮಾನತೆಯಿಂದ ಬದುಕಬೇಕೆಂಬ ಹಂಬಲವನ್ನು ಹೊಂದಿದ್ದರೆಂಬುದನ್ನು ಮೇಲಿನ ಸಾಲುಗಳಿಂದ ವ್ಯಕ್ತವಾಗುತ್ತದೆ. ಅಂಬೇಡ್ಕರ್ ಅವರ ಈ ಪರಿಶ್ರಮದಿಂದ ಇಂದು ದಲಿತ ಜನಾಂಗ ತಲೆಯೆತ್ತಿ ನಿಲ್ಲಲು

ಸಾಧ್ಯವಾಗಿದೆ. ಕೆಳ ವರ್ಗಗಳೆಲ್ಲವೂ ಸಮಾನತೆಯನ್ನು ಕಾಣುತ್ತಿವೆ. ಸಮಾಜದಲ್ಲಿ ಎಲ್ಲರಂತೆ ಸಮಾನತೆಯಿಂದ ಬದುಕಲು ಒಂದು ಸದವಕಾಶವಾಗಿದೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**

1. ಅಂಬೇಡ್ಕರ್ ಬಿ.ಆರ್., (1951 ಮೇ 20), ಬುದ್ಧಿಸಂ ಕೆನ್ಎಂಡ್ ಇಂಡಿಯಾಸ್ ಇಲ್ಸ್ (ಬುದ್ಧ ಜಯಂತಿಯದಂದು ಮಾಡಿದ ಭಾಷಣ), ನ್ಯೂಡೆಲ್ಲಿ, ಇಂಡಿಯಾ.
2. ಅಂಬೇಡ್ಕರ್ ಬಿ.ಆರ್., (1956 ನವೆಂಬರ್ 15–21), ಬುದ್ಧಿಸಂ ಅಂಡ್ ಕಮ್ಯೂನಿಸಂ (ನಾಲ್ಕನೇ ವಿಶ್ವ ಬೌದ್ಧ ಸಮ್ಮೇಳನದಲ್ಲಿ ಮಾಡಿದ ಭಾಷಣ), ಕಠ್ಮಂಡು, ನೇಪಾಳ.
3. ಜವರಯ್ಯ ಮ.ನ., (1995), ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.
4. ಅಂಬೇಡ್ಕರ್ ಬಿ.ಆರ್., (2015), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.